# ಮಹಾರಾಣಿ ವಾಣಿ ವಿಲಾಸ ಸನ್ನಿಧಾನ ಮತ್ತು ಪ್ರತಿಭಾವರ್ಮಾ

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

## ಮಹಾರಾಣಿ ವಾಣಿವಿಲಾಸ ಸನ್ನಿಧಾನ

### ಧರ್ಮಶೀಲ ರಾಜಪ್ರತಿನಿಧಿ



ಸ್ವಾಮಿ ವಿವೇಕಾನಂದರಿಗೆ ಪಾಶ್ಚಾತ್ಯ ದೇಶದ ಪಯಣದಲ್ಲಿ ಜೆಮ್‌ಶಟ್‌ಜಿ ಟಾಟಾ ಅವರೊಡನೆ ಭೇಟಿಯಾಯಿತು. ಮಾತು ಕತೆಯ ನಡುವೆ ಸ್ವಾಮೀಜಿ ಭಾರತ ದೇಶದ ಮೂಲಸಂಪತ್ತನ್ನು ನಮ್ಮಲ್ಲಿಯೇ ಉಳಿಸಿ ಕೊಳ್ಳಬೇಕೆಂಬ ಇಚ್ಛೆಯನ್ನು ಪ್ರಕಟಿಸಿದ್ದರು. ಸ್ವಾಮೀಜಿಯವರ ಮಾತುಕತೆ, ಅಭಿಪ್ರಾಯ, ಆಲೋಚನೆಗಳು ಟಾಟಾರವರ ಮೇಲೆ ಅದೆಷ್ಟು ಪ್ರಭಾವ ಬೀರಿತೆಂದರೆ ಅವರು ವಿಜ್ಞಾನದ ಆವಿಷ್ಕಾರ ಗಳಿಗಾಗಿ ಸಂಸ್ಥೆಯೊಂದನ್ನು ತೆರೆಯಬೇಕೆಂದು ನಿರ್ಧರಿಸಿದರು. ಅಷ್ಟೇ ಅಲ್ಲದೆ ಆ ಸಂಸ್ಥೆಯ ಉಸ್ತುವಾರಿಯನ್ನು ಸ್ವಾಮೀಜಿಯೇ ವಹಿಸಿಕೊಳ್ಳಬೇಕೆಂದು ವಿನಂತಿಸಿಕೊಂಡರು. ಸಂನ್ಯಾಸಧರ್ಮಕ್ಕೆ ಇದು ತಕ್ಕುದಲ್ಲವೆಂದು ಸ್ವಾಮೀಜಿ ಒಪ್ಪಲಿಲ್ಲ. ಬದಲಾಗಿ ಸೋದರಿ ನಿವೇದಿತಾಳಿಗೆ ಈ ಯೋಜನೆಗೆ ಸಹಾಯ ಮಾಡಲು ಕೋರಿದರು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಮೈಸೂರಿನ ರಾಜ ಪ್ರತಿನಿಧಿ ಮಹಾರಾಣಿ ವಾಣಿವಿಲಾಸ ಸನ್ನಿಧಾನರವರನ್ನು ಸ್ವಾಮೀಜಿ ಬಿನ್ನವಿಸಿಕೊಂಡರು.

ಸ್ವಾಮೀಜಿಯ ಬಿನ್ನಹದ ಮೇರೆಗೆ ಮೈಸೂರಿನ ಮಹಾರಾಣಿ ಹಾಗೂ ಯುವರಾಜರು ಪ್ರಥಮ ಭಾರತೀಯ ವಿಜ್ಞಾನ ಸಂಸ್ಥೆ (Indian Institute of Science)ಯನ್ನು ಪ್ರಾರಂಭಿಸಲು ಬೇಕಾದ ಆರ್ಥಿಕ ನೆರವು ಮತ್ತು ೪೦೦ ಎಕರೆ ಜಾಗವನ್ನು ಬೆಂಗ ಳೂರಿನಲ್ಲಿ ನೀಡಿದರು. ದುರದೃಷ್ಟವಶಾತ್, ಸಂಸ್ಥೆಯ ನಿರ್ಮಾಣಕ್ಕೆ ಮುಂಚೆಯೇ ಜೆಮ್‌ಶೆಟ್‌ಜೀ ಟಾಟಾ ಹಾಗೂ ಮಹಾರಾಣಿ ಇಬ್ಬರೂ ಹಠಾತ್ತಾನೆ ಇಹಲೋಕ ತ್ಯಜಿಸಿದರು. ಅಂತೂ ಟಾಟಾರವರ ಕನಸು ೧೯೧೧ರಲ್ಲಿ ನನಸಾಯಿತು. ಫೆಬ್ರವರಿ ೧, ೧೯೧೧ರಂದು ಯುವರಾಜರಾದ ನಾಲ್ಮಡಿ ಕೃಷ್ಣರಾಜ ಒಡೆಯರ್ ಅಸ್ತಿಭಾರವನ್ನು ಹಾಕಿದರು. ಜೆಮ್‌ಶೆಟ್‌ಜೀ ಟಾಟಾರವರ ಇಚ್ಛೆಯಂತೆ ಸಂಸ್ಥೆಯ ನಾಮಕರಣದಲ್ಲಿ ಟಾಟಾರವರ ಹೆಸರು ಇಡಲಿಲ್ಲ. ಬದಲಾಗಿ ೧೯೨೨ರಲ್ಲಿ ಅವರ ಸ್ಮರಣಾರ್ಥವಾಗಿ ಒಂದು ಸ್ಮಾರಕವನ್ನು ನಿರ್ಮಿಸ ಲಾಯಿತು. ಇಂದು ಈ ಸಂಸ್ಥೆಯು ಕಂಪ್ಯೂಟರ್, ಬಾಹ್ಯಾಕಾಶ, ಅಣುಶಕ್ತಿ ಇತ್ಯಾದಿ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿ ಭಾರತದ ಕೀರ್ತಿ ಪತಾಕೆಯನ್ನು ಬಹು ಎತ್ತರಕ್ಕೆ ಹಾರಿಸಿದೆ.

ದೊಡ್ಡವರ ಕನಸು ದೊಡ್ಡದಾಗಿಯೇ ಇರುತ್ತದಲ್ಲವೆ?

## ಪ್ರತಿಭಾ ವರ್ಮಾ

### ಸುಧಾರಕ ತಾಯಿ

ಸುಬ್ರಹ್ಮಣ್ಯ ಅಯ್ಯರ್‌ರವರಿಗೆ ಕೊಡಂಗಲ್ಲೂರಿನ ರಾಜ ವಂಶಸ್ಥರೊಡನೆ ನಿಕಟವಾದ ಸಂಬಂಧವಿತ್ತು. ಏಕೆಂದರೆ ಅಯ್ಯರ್ ಪತ್ನಿ ಪ್ರತಿಭಾ ವರ್ಮಾ ಆ ರಾಜವಂಶಕ್ಕೆ ಸೇರಿದವಳು. ವಿದ್ಯಾ ವಂತಳೂ, ದೃಢಸ್ವಭಾವದವಳೂ ಆದ ಆಕೆಯ ಹೃದಯವೂ ಬಡ ಬಗ್ಗರಿಗೆ ಅನಾಥರಿಗೆ ದಯೆಯಿಂದ ಕೂಡಿತ್ತು. ದೀನಹೀನರಿಗೆ ಅವಳ ಸಹಾಯಹಸ್ತ ಸದಾ ಚಾಚಿರುತ್ತಿತ್ತು. ಆದರೆ ಒಂದೇ ಒಂದು ಕೊರತೆಯೆಂದರೆ ಆ ದಂಪತಿಗಳಿಗೆ ಮಕ್ಕಳಿರಲಿಲ್ಲ.



ಒಮ್ಮೆ ಸ್ವಾಮಿ ವಿವೇಕಾನಂದರು ಇವರ ಮನೆಗೆ ಭೇಟಿ ನೀಡಿದ್ದರು. ಆ ಸಮಯ ದಲ್ಲಿ ಸ್ವಾಮೀಜಿಯವರ ಆರೋಗ್ಯ ಹದಗೆಟ್ಟಿತ್ತು. ಆದರೆ ಪ್ರತಿಭಾ ವರ್ಮಾಳ ಶ್ರದ್ಧಾಭಕ್ತಿಗಳಿಂದ ಕೂಡಿದ ಅವಿರತ ಸೇವೆ ಯಿಂದಾಗಿ ಸ್ವಾಮೀಜಿ ಶೀಘ್ರವಾಗಿ ಗುಣಮುಖರಾದರು. ಇದರಿಂದ ಸಂತುಷ್ಟ ರಾದ ಸ್ವಾಮೀಜಿ ಆಕೆಗೆ, ''ತಾಯಿ, ನನಗಾಗಿ ನೀವು ಎಷ್ಟೊಂದು ಪರಿಶ್ರಮಪಟ್ಟಿರುವಿರಿ. ಭಗವಂತ ನಿಶ್ಚಿತವಾಗಿ ನಿಮ್ಮನ್ನು ಆಶೀ ರ್ವದಿಸುವನು'' ಎಂದು ಮನಃಪೂರ್ವಕ ಹರಸಿ, ವಿದಾಯ ಹೇಳಿ ದರು. ಅವರ ಮನೆಯಿಂದ ಕಾಲಡಿಗೆ ಹೊರಟ ಸ್ವಾಮೀಜಿ ಮಾರನೇ ದಿನ ಹಿಂದಿರುಗಿದರು. ಅವರೊಡನೆ ಏಳು ವರ್ಷದ ಬಾಲಕನನ್ನು ಕರೆತಂದಿದ್ದರು. ಪಾದ್ರಿಯೊಬ್ಬ ಆ ಮಗುವನ್ನು ಚೆನ್ನಾಗಿ ಥಳಿಸು ತ್ತಿದ್ದುದನ್ನು ಕಂಡು, ಮರುಗಿ ಅಲ್ಲಿಂದ ಆತನನ್ನು ಬಿಡಿಸಿಕೊಂಡು ಬಂದಿದ್ದರು. ಮಕ್ಕಳಿಲ್ಲದ ಪ್ರತಿಭಾ ವರ್ಮಾಳಿಗೆ ಸ್ವಾಮೀಜಿ ಆ ಬಾಲಕನ ಜವಾಬ್ದಾರಿಯನ್ನು ಒಪ್ಪಿಸಿದರು. ಮಾಧವನ್ ಪಿಳ್ಳೈ ಎಂಬ ಈತನು ಮುಂದೆ ಕಾಲೇಜಿನಲ್ಲಿ ಹೆಸರಾಂತ ಉಪನ್ಯಾಸಕನಾದನು. ೧೮೯೭ರಲ್ಲಿ ಸ್ವಾಮೀಜಿ ಪಾಶ್ಚಾತ್ಯ ದೇಶದಿಂದ ಭಾರತಕ್ಕೆ ಹಿಂತಿರುಗಿ ಬಂದಾಗ ಮದ್ರಾಸಿನಲ್ಲಿ ಅವರನ್ನು ಸ್ವಾಗತಿಸಲು ಹೋಗಿದ್ದನು. ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ಪ್ರತಿಭಾ ವರ್ಮಾ ಸಕ್ರಿಯ ವಾಗಿ ಭಾಗವಹಿಸಿದಳು; ಸ್ತ್ರೀಶಿಕ್ಷಣ ಕ್ಷೇತ್ರದಲ್ಲೂ ಬಹಳ ಶ್ರಮಿಸಿ ದಳು. ಕೊಚ್ಚಿಯ ಅಸಹಕಾರ ಚಳುವಳಿಯಲ್ಲೂ ಆಕೆಯೇ ಮುಂದಾಳು.

''ಭಾರತದಲ್ಲಿ ಮಹಿಳೆಯ ವೈಶಿಷ್ಟ್ಯ ಯಾವುದೆಂದರೆ ಅವಳ ತಾಯ್ತನ... ಭೌತಿಕವಾಗಿ ಹುಟ್ಟಿದ ಮಗು ಆರ್ಯನಲ್ಲ; ಆಧ್ಯಾತ್ಮಿಕ ವಾಗಿ ಹುಟ್ಟಿದ ಮಗುವೇ ಆರ್ಯ'' — *ಸ್ವಾಮಿ ವಿವೇಕಾನಂದ*